# ಶ್ರೀಶಾಂತ್: ಮುಂದೇನು?

ಎಸ್.ಶ್ರೀಶಾಂತ್ ಸಿಟ್ಟಿಗೆದ್ದಿದ್ದಾರೆ. ಕೇರಳ ಹೈಕೋರ್ಟ್‌ನ ವಿಭಾಗೀಯ ಪೀಠ ಅವರ ವಿರುದ್ಧ ತೀರ್ಪಿತ್ತಿದೆ. ಶ್ರೀಶಾಂತ್‌ಗೆ ಕ್ರಿಕೆಟ್ ಆಡದಂತೆ ಜೀವನಪೂರ್ತಿ ನಿಷೇಧ ಹೇರಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಆದೇಶವನ್ನು ಹೈಕೋರ್ಟ್ ಪೀಠ ಎತ್ತಿಹಿಡಿದಿದೆ. 'ಬಿಸಿಸಿಐ ನನ್ನನ್ನು ಏಕಾಂಗಿಯಾಗಿಸಿ ಕ್ರಮ ಕೈಗೊಂಡಿದೆ. ಸುಪ್ರೀಂಕೋರ್ಟ್ ನೇಮಿಸಿದ ಲೋಧಾ ಸಮಿತಿ ನೀಡಿದ ವರದಿಯಲ್ಲಿ ಮ್ಯಾಚ್ ಫಿಕ್ಸಿಂಗ್‌ಗೆ ಸಂಬಂಧಿಸಿ ಇನ್ನೂ 13 ಮಂದಿ ಆಟಗಾರರ ಹೆಸರು ಇದೆಯಲ್ಲ.. ಅವರ ಬಗ್ಗೆ ಏನು ಮಾಡಿದ್ದೀರಿ? ಎಂದು ಶ್ರೀಶಾಂತ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಉಳಿದಿರುವುದು ಒಂದೇ ದಾರಿ. ಈ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿಗೆ ಹೋಗುತ್ತೇನೆ. ಎಲ್ಲವೂ ಹೊರಗೆ ಬರಲಿ' ಎನ್ನುವುದು ಅವರ ವಾದ.

ಶಾಂತಕುಮಾರನ್ ಶ್ರೀಶಾಂತ್ ಈಗ ಸಿಟ್ಟಿಗೆದ್ದಿರುವುದು ಸಹಜವೇ. 2013ರಲ್ಲಿ ಐಪಿಎಲ್ ಪಂದ್ಯಗಳಲ್ಲಿ ಸ್ಪಾಟ್ ಫಿಕ್ಸಿಂಗ್‌ನ ಆರೋಪಗಳು ಹೊರಬಿದ್ದಾಗ ಬಹುತೇಕ ಕ್ರಿಕೆಟ್ ಅಭಿಮಾನಿಗಳು ಇದಕ್ಕಿಂತ ಹೆಚ್ಚು ಸಿಟ್ಟಿಗೆದ್ದಿದ್ದರು. ಭಾರತದ ವೇಗದ ಬೌಲಿಂಗ್ ಗೆ ಹೊಸ ಹುರುಪು ತುಂಬಿದ್ದ ಶ್ರೀಶಾಂತ್, ಐಪಿಎಲ್ ಮಾತ್ರವಲ್ಲ, ಭಾರತದ ಕ್ರಿಕೆಟ್ ತಂಡದಲ್ಲೂ ಸಾಕಷ್ಟು ಮಿಂಚಿದ್ದರು. ರಾಜಸ್ತಾನ ರಾಯಲ್ಸ್ ತಂಡದಲ್ಲಿ ಆಟವಾಡುವಾಗ ಐಪಿಎಲ್ ನ ಪಂದ್ಯದಲ್ಲಿ ಬುಕ್ಕೀಗಳ ಜತೆ ಸೇರಿ ಸ್ಪಾಟ್ ಫಿಕ್ಸಿಂಗ್‌ಗೆ ನೆರವಾದದ್ದು ಗೊತ್ತಾದಾಗ ಶ್ರೀಶಾಂತ್ ಬಗ್ಗೆ ಇದ್ದ ಅಭಿಮಾನವೆಲ್ಲ ನೆಗೆದು ಬಿದ್ದುಹೋಯಿತು. ಈಗ ಶ್ರೀಶಾಂತ್ ಬಗ್ಗೆ ಕೈಬೆರಳೆಣಿಕೆಯ ಕೆಲವರನ್ನು ಬಿಟ್ಟರೆ ಸಾಮಾನ್ಯ ಕ್ರಿಕೆಟ್ ಪ್ರೇಕ್ಷಕರು ಯಾರೂ ಕನಿಕರ ತೋರುತ್ತಿಲ್ಲ.

ಹಾಗೆಂದು ಶ್ರೀಶಾಂತ್ ಈಗ ಎತ್ತಿರುವ ಪ್ರಶ್ನೆಗಳನ್ನು ನಾವು ನಿರ್ಲಕ್ಷಿಸುವಂತೆಯೂ ಇಲ್ಲ. 'ಬಿಸಿಸಿಐ ನನ್ನನ್ನು ಮಾತ್ರ ಬಲಿಪಶು ಏಕೆ ಮಾಡುತ್ತಿದೆ? ಲೋಧಾ ಸಮಿತಿಯಲ್ಲಿ ಹೆಸರಿದ್ದ 13 ಮಂದಿಯಲ್ಲಿ ಹಲವರು ಬಳಿಕ ದೇಶದ ತಂಡದಲ್ಲಿ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಟವಾಡಿದ್ದಾರೆ. ಕೆಲವರು ಈಗಲೂ ಆಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಏಕಿಲ್ಲ? ಮ್ಯಾಚ್ ಫಿಕ್ಸಿಂಗ್ ಆರೋಪದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ತಾನ ರಾಯಲ್ಸ್ ತಂಡಗಳನ್ನು ನಿಷೇಧಿಸಲಾಯಿತು. ಆದರೆ ಎರಡು ವರ್ಷಗಳ ಬಳಿಕ ನಿಷೇಧ ರದ್ದುಗೊಳಿಸಲಾಯಿತು. ಈಗ ಅವರೂ ಐಪಿಎಲ್ ಆಡುತ್ತಿದ್ದಾರೆ. ಆ ಆರೋಪಗಳು ಏನಾದವು? ನಾಲ್ಕೂವರೆ ವರ್ಷಗಳ ಕಾಲ ಸುಮ್ಮನಿದ್ದೆ. ಈಗ ಮಾತನಾಡಲೇಬೇಕಿದೆ. ದೇಶಕ್ಕಾಗಿ ಮತ್ತೆ ಆಡುವ ಪ್ರಶ್ನೆ ಮಾತ್ರ ಇದಲ್ಲ; ನನ್ನ ಗೌರವದ ಪ್ರಶ್ನೆ' ಎಂದಿದ್ದಾರೆ ಶ್ರೀಶಾಂತ್.

ಈ 13 ಮಂದಿಯ ಹೆಸರನ್ನು ಬಿಸಿಸಿಐ ಏಕೆ ಬಹಿರಂಗಪಡಿಸಿಲ್ಲ ಎನ್ನುವುದು ಮಹತ್ವದ ಪ್ರಶ್ನೆಯೇ. ಶ್ರೀಶಾಂತ್ ಪ್ರಕಾರ, 'ದೆಹಲಿ ಪೊಲೀಸ್ ತಂಡ ಈ 13 ಮಂದಿಯ ಬಗ್ಗೆ ನನ್ನಲ್ಲಿ ಪ್ರಶ್ನೆ ಮಾಡಿತ್ತು. ಆದರೆ ನಾನು ಅವರ ಹೆಸರು ಹೇಳುವುದಿಲ್ಲ.' ಬಿಸಿಸಿಐ ವಕ್ತಾರರ ಪ್ರಕಾರ, '13 ಮಂದಿಯಲ್ಲಿ ಈಗ ಯಾರೂ ದೇಶದ ಪರವಾಗಿ ಅಥವಾ ಬಿಸಿಸಿಐ ಪ್ರಾಯೋಜಿತ ಪಂದ್ಯಗಳಲ್ಲಿ ಆಡುತ್ತಿಲ್ಲ.' ಇತ್ತಂಡದ ವಾದದ ನಡುವೆ ಸತ್ಯ ಎಲ್ಲಿ ಅಡಗಿದೆ ಎನ್ನುವುದನ್ನು ಯಾರು ಬಯಲಿಗೆಳೆಯಬೇಕು?

ಶ್ರೀಶಾಂತ್ ಸುಪ್ರೀಂಕೋರ್ಟಿಗೆ ಪ್ರಕರಣವನ್ನು ಒಯ್ದರೆ, ಬಿಸಿಸಿಐ ಮೂಗಿನಡಿಯಲ್ಲಿ ನಡೆದ ಮತ್ತಷ್ಟು ಫಿಕ್ಸಿಂಗ್ ಹಗರಣಗಳು ಬಯಲಿಗೆ ಬರಬಹುದು. ಲೋಧಾ ಸಮಿತಿಯ ಶಿಫಾರಸ್ಸುಗಳನ್ನು ಬಿಸಿಸಿಐ ಸರಿಯಾಗಿ ಜಾರಿಗೆ ತಂದಿಲ್ಲ ಎಂದು ಸ್ವತಃ ಸುಪ್ರೀಂಕೋರ್ಟ್ ಹಿಂದೆ ಸಿಟ್ಟು ವ್ಯಕ್ತಪಡಿಸಿದ್ದಿದೆ. ಈಗ ಏನಾಗುತ್ತೆ ಎನ್ನುವುದನ್ನು ಕಾದು ನೋಡಬೇಕು. ಬಿಹಾರ ಕ್ರಿಕೆಟ್ ಅಸೋಸಿಯೇಶನ್ ಸ್ಪಾಟ್ ಫಿಕ್ಸಿಂಗ್ ಬಗ್ಗೆ ಸಲ್ಲಿಸಿದ ಅರ್ಜಿಯೊಂದರ ವಿಚಾರಣೆಯೂ ಸುಪ್ರೀಂಕೋರ್ಟಿನಲ್ಲಿ ಪೂರ್ತಿ ಮುಗಿದಿಲ್ಲ.

ಈ ಮಧ್ಯೆ ಶ್ರೀಶಾಂತ್, 'ಬಿಸಿಸಿಐ ನಿಷೇಧ ಇದ್ದರೆ ಇರಲಿ. ನಾನು ವಿದೇಶೀ ತಂಡದ ಪರವಾಗಿ ಪ್ರೀಮಿಯರ್ ಲೀಗ್ ಪಂದ್ಯಗಳಲ್ಲಿ ಆಡುತ್ತೇನೆ. ನನ್ನನ್ನು ಐಸಿಸಿ (ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ) ಏನೂ ಬ್ಯಾನ್ ಮಾಡಿಲ್ಲವಲ್ಲ?' ಎಂದಿದ್ದಾರೆ. ಅದೂ ಸರಿಯೇ. ಮೂಲಗಳ ಪ್ರಕಾರ, ಶ್ರೀಶಾಂತ್ ಸ್ಕಾಟ್ಲೆಂಡ್‌ನ ಫೈಫ್ ರಾಜ್ಯದಲ್ಲಿ ಗ್ಲೆನ್‌ರೋಡ್ಸ್ ಕ್ಲಬ್ ಪರವಾಗಿ ಪ್ರೀಮಿಯರ್ ಲೀಗ್‌ನಲ್ಲಿ ಆಡುವುದು ನಿಶ್ಚಿತವಾಗಿತ್ತು. ಆ ಕ್ಲಬ್‌ನ ಚೇರ್‌ಮನ್, ಶ್ರೀಶಾಂತ್‌ನ ಗೆಳೆಯನಂತೆ.

'ನಮ್ಮ ದೇಶದಲ್ಲಿ ನಿಷೇಧಕ್ಕೆ ಒಳಗಾದವರು ಬೇರೆ ದೇಶದಲ್ಲಿ ಹೋಗಿ ಹೇಗೆ ಆಡುತ್ತಾರೆ?' ಎಂದು ಕೆಲವು ಕ್ರಿಕೆಟ್ ದೇಶಭಕ್ತರು ಜಾಲತಾಣಗಳಲ್ಲಿ ಪ್ರಶ್ನೆ ಒಗೆದಿದ್ದಾರೆ. ಅದಕ್ಕೆ ಶ್ರೀಶಾಂತ್ ಬೆಂಬಲಿಗರ ಬಳಿ ತರ್ಕಬದ್ಧ ಮರುಪ್ರಶ್ನೆಗಳಿವೆ. 'ಪ್ರಿಯಾಂಕಾ ಚೋಪ್ರಾ ಬಾಲಿವುಡ್ ಸಿನಿಮಾಗಳನ್ನು ಬಿಟ್ಟು ಹಾಲಿವುಡ್‌ನಲ್ಲಿ ಹೋಗಿ ಸಿನಿಮಾ ಮಾಡುತ್ತಿಲ್ಲವೆ? ಶ್ರೀಶಾಂತ್ ಸ್ಕಾಟ್ಲೆಂಡ್ ಕ್ಲಬ್‌ಗೆ ಹೋದರೆ ಏನು ತಪ್ಪು?' ಎಂದು ಅಭಿಮಾನಿಗಳು ಅಡ್ಡವಾದ ಹೂಡಿದ್ದಾರೆ.

ಒಂದು ದೇಶದ ವ್ಯಕ್ತಿ ಇನ್ನೊಂದು ದೇಶದ ತಂಡದಲ್ಲಿ ಆಡುವುದು ಕ್ರಿಕೆಟ್‌ನಲ್ಲಿ ಹೊಸತೇನೂ ಅಲ್ಲ. ಹಿಂದೆ, ದಕ್ಷಿಣ ಆಫ್ರಿಕಾ ದೇಶವನ್ನು ವರ್ಣಬೇಧದ ಹಿನ್ನೆಲೆಯಲ್ಲಿ ಐಸಿಸಿ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಂದ ನಿಷೇಧಿಸಿತ್ತು. ಆಗ ದ.ಆಫ್ರಿಕಾ ತಂಡದ ಕೆಪ್ಲೆರ್ ವೆಸೆಲ್ಸ್, ಆಸ್ಟ್ರೇಲಿಯಾ ಆರಂಭಿಕ ಆಟಗಾರನಾಗಿ ಆಡಿದ್ದರು. ಜಿಂಬಾಬ್ವೆಯ ಗ್ರೇಮ್ ಹಿಕ್ ಮತ್ತು ದಕ್ಷಿಣ ಆಫ್ರಿಕಾದ ಕೆವಿನ್ ಪೀಟರ್‌ಸನ್ ಇಂಗ್ಲೆಂಡ್ ತಂಡದ ಪರವಾಗಿ ಆಟವಾಡಿದ್ದರು. ಲೂಕ್ ರೋಂಚಿ ಆಸೀಸ್ ಮತ್ತು ಇಂಗ್ಲೆಂಡ್ ಎರಡೂ ತಂಡದಲ್ಲಿ ಕ್ರಿಕೆಟ್ ಆಡಿದ್ದಿದೆ. ಇಯಾನ್ ಮೋರ್ಗನ್ ಐರ್ಲಂಡ್ ಮತ್ತು ಇಂಗ್ಲೆಂಡ್ ಎರಡೂ ತಂಡದಲ್ಲಿ ಆಡಿದ್ದಿದೆ. ಶ್ರೀಶಾಂತ್ ವಲಸೆ ಹೋಗುತ್ತಾರೋ ಇಲ್ಲವೋ, ಪ್ರಶ್ನೆಗಳು ಎದ್ದಿರುವುದಂತೂ ನಿಜ. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65